

ಆಪರೇಷನ್ ಆಗಬೇಕಂತೆ. ಏನು ಮಾಡುವುದೋ ಗೊತ್ತಾಗುತ್ತಿಲ್ಲ. ಅಮ್ಮನ ಜೊತೆ ಯಾರಾದರೂ ಇರಬೇಕಲ್ಲ. ಅಡುಗೆ, ಊಟ, ಮನೆಯಲ್ಲಿ ಹಸು ಕರು. ನೀನು ಬೇರೆ ಬಾಣಂತಿ. ನನಗೆ ದಿಕ್ಕೇ ತೋಚುತ್ತಿಲ್ಲ.'

ಶಶಿಧರನ ಮಾತು ಕೇಳಿದ ನಮ್ಮಮ್ಮ 'ಅಯ್ಯೋ ದೇವ್ರೆ... ನಮ್ ಸಕುಂತನ್ನ ಕಳುಸ್ತೀವಿ. ನೆಂಟರು ಕಷ್ಟ ಸುಖಕ್ಕೆ ಆಗ್ದೆ ಮತ್ತ್ಯಾಕೆ? ಸಕುಂತ ಬಾ ಮಗನೆ, ಇಲ್ಲಿ ಕಾವೇರಕ್ಕಗೆ ಹುಷಾರಿಲ್ಲಂತೆ. ನಾಕು ದಿನ ಇದ್ದು ಬಾ. ಊಟ ತಿಂಡಿ ಮಾಡಿಕೊಡು. ಎಂತಾ ನಂಟ್ರು ಕಷ್ಟಕ್ಕೆ ಆಗ್ಲಿಲ್ಲ ಅಂತಾರೆ,' ಅಪ್ಪಯ್ಯನೂ ದನಿಗೂಡಿಸಿದ್ದರು.

'ರಾಜೇಂದ್ರನನ್ನ ಬಿಟ್ಟು ನಾನು ಎಲ್ಲೂ ಹೋಗಲ್ಲ. ಅಕ್ಕಯ್ಯ ಹೋಗಕ್ಕಯ್ಯ. ನಾ ಹೋಗಲ್ಲ' ಅಂತ ರಂಪ ರಾದ್ಧಾಂತ ಮಾಡಿದ ಸಕುಂತಳನ್ನು ನಾನೆ ಸಮಾಧಾನ ಮಾಡಿದೆ. ತಲೆ ಬಾಚಿ, ಜಡೆ ಹಾಕಿ, ಬ್ಯಾಗಿಗೆ ಬಟ್ಟೆ ತುಂಬಿ 'ನಾಕು ದಿನ ಇದ್ದು ಬಾ. ಪಾಪ, ಅತ್ತೆ ಎಷ್ಟು ಒಳ್ಳೆಯವರು ಅಂತ ನಿನಗೂ ಗೊತ್ತಲ್ಲ' ಅಂದೆ.

'ಅಕ್ಕಯ್ಯ, ನಾನು ಹೋಗಲ್ಲ. ನನ್ನ ಕಳಸ್ಬೇಡ' ಅನ್ನುತ್ತಲೇ ತಿರುಗಿ ನೋಡುತ್ತಲೇ ಶಶಿಧರನ ಜೊತೆ ಹೋದಳು. ಮರೆಯಾಗುವ ತನಕ ನೋಡಿ ರಾಜೇಂದ್ರ ಅತ್ತ ಅಂತ ಒಳಗೆ ಹೋದೆ. ಸಕುಂತ ಹೊರಟುಹೋದ ಮೇಲೆ ಮನೆ ಬಿಕೋ ಎನ್ನತೊಡಗಿತು.

ಸಕುಂತ ಹೋಗಿ ಒಂದು ತಿಂಗಳಾಯಿತು. ವಾಪಾಸು ಬರಲಿಲ್ಲ. ಎರಡು ತಿಂಗಳಾಯಿತು. ಸಕುಂತ ಹೋಗಲಿ, ಶಶಿಧರ ಮಗು ನೋಡಲೂ ಬರಲಿಲ್ಲ. ಈ ನಡುವೆ ಅಮ್ಮ ಅಪ್ಪಯ್ಯ ಅತ್ತೆ ನೋಡಲು ಹೋಗಿದ್ದಾಗ, 'ನನಗೆ ಒಂದು ಲೋಟ ನೀರು ತಗಂದು ಕುಡಿಯಕೆ ಶಕ್ತಿ ಇಲ್ಲ. ಒಂದ್ ಹೆಜ್ಜೆ ನಡಿಯನ ಅಂದ್ರೆ ಆಗಲ್ಲ. ಬೇಜಾರ ಮಾಡ್ಬೇಡಿ, ಮುಂದಿನ ವಾರ ಕಳಸ್ತೀನಿ' ಎಂದರಂತೆ. ಮೂರು ತಿಂಗಳಾಯಿತು. ಸಕುಂತಳ ಸುದ್ದಿಯೇ ಇಲ್ಲ. ಶಶಿಧರನೂ ಬರುತ್ತಿಲ್ಲ. ಒಂದು ಕಾಗದವನ್ನಾದರೂ ಬರೆಯಬಹುದಿತ್ತು. ಏನಾಗಿರಬಹುದು ಅಂತ ಯೋಚಿಸುತ್ತಾ ಕುಳಿತಿದ್ದಾಗ ಮಗುವನ್ನು ನೋಡುವ ನೆವ ಮಾಡಿಕೊಂಡು ಬಂದ ರಾಧಕ್ಕ, 'ವಿಜಿಯ, ನಿನ್ನೆ ಪ್ಯಾಟೆಗೆ ಹೋಗಿದ್ದೆ. ನಿನ್ನ ಗಂಡ, ಸಕುಂತ ಆಸ್ಪತ್ರೆ ಕಡಿಂದ ಬರ್ತಾ ಇದ್ರು, ಕತ್ತಲ್ಲಿ ಕರಿಮಣಿ ಸರ ನೋಡಿದಂಗಾಯ್ತು. ಅದನ್ನ ಹೇಳನ ಅಂತ ಬಂದೆ' ಎಂದರು.

ಮರುದಿನ ರಾಜೇಂದ್ರನನ್ನು ಎತ್ತಿಕೊಂಡು ಗಂಡನ ಮನೆಗೆ ಹೊರಟೆ. ನಾವುಗಳು ಅಂದರೆ, ಅಪ್ಪಯ್ಯ, ಅಮ್ಮ, ದೊಡ್ಡಮ್ಮ, ಚಿಕ್ಕಮ್ಮನ ಮಗ, ರಾಜೇಂದ್ರ, ನಾನು ಮನೆ ಸೇರಿದಾಗ ಗಂಟೆ ಹನ್ನೆರಡು. ಶಶಿಧರ ಮನೆಯಲ್ಲಿರಲಿಲ್ಲ. ಅತ್ತೆ ಕಾರು ನಿಂತ ಸದ್ದು ಕೇಳಿ ಎದ್ದು ಬಂದರು. ಬಹಳ ಸೋತುಹೋಗಿದ್ದರು. ರಾಜೇಂದ್ರನನ್ನು ತಬ್ಬಿಕೊಂಡು ಅತ್ತರು. 'ನಾನು ಬದುಕಿದ್ದೇ ಹೆಚ್ಚು ವಿಜಿಯ' ಎನ್ನುತ್ತ ನನ್ನನ್ನು ತಬ್ಬಿಕೊಂಡರು. ನಾನು 'ಇವರೆಲ್ಲಿ?' ಎಂದೆ. 'ತೋಟಕ್ಕೆ ಹೋಗಿದ್ದಾನೆ. ಈಗ ಬರ್ತಾನೆ' ಎಂದರು. 'ಸಕುಂತ ಎಲ್ಲಿ?' ಎಂದೆ. 'ಅಯ್ಯೋ, ಆ ಹುಡುಗಿ ಇದ್ದದ್ದಕ್ಕೆ ನಾನು ಬದುಕಿದ್ದು. ಹಿಂದಗಡೆ ಇದಾಳ. ನೀವು ಬಂದಿರದು ಗೊತ್ತಾಗಿಲ್ಲ. ಒಂದ್ ಗಳಿಗೆ ಪುರುಸತ್ತಿಲ್ಲ, ಪಾಪ' ಎಂದರು. ಎಷ್ಟೋ ಹೊತ್ತಿನ ಮೇಲೆ ಶಶಿಧರ ಬಂದರು. ನಾನೇ ಮಾತನಾಡಿಸಿ ಮಗುವನ್ನು ಅವರ ಕೈಗೆ ಕೊಟ್ಟೆ.

'ಸಕುಂತ ಸಕುಂತ... ಎಲ್ಲಿದಿಯಾ?'

ಒಳ ಹೋದೆ. ನನ್ನನ್ನು ನೋಡಿದವಳೆ ಹಿತ್ತಲ ಕಡೆಗೆ ಓಡತೊಡಗಿದಳು. ಹಿಂದೆಯೇ ಹೋದೆ. ಕೈ ಹಿಡಿದು ನಿಲ್ಲಿಸಿ, 'ಏನಾಗಿದೆ ನಿನಗೆ? ಯಾಕೆ ಮುಖ ಕೊಟ್ಟು ಮಾತಾಡುತ್ತಿಲ್ಲ?' ಎಂದೆ.

ಸಕುಂತ ಅಳುತ್ತಾ ನನ್ನ ಕಾಲಿಗೆ ಬಿದ್ದಳು. ನಡೆದುದನ್ನ ಹೇಳಿದಳು. ಕಿರುಚಾಡಿ ತಲೆ ಚಚ್ಚಿಕೊಂಡು ಅತ್ತಳು. ಮನೆಯಲ್ಲಿದ್ದವರೆಲ್ಲಾ ಗರ ಬಡಿದಂತೆ ನಿಂತುಬಿಟ್ಟರು. ಸಕುಂತ ಗರ್ಭಿಣಿಯಾಗಿದ್ದಳು. ರಾಧಕ್ಕ ಹೇಳಿದ್ದು ನೆನಪಾಯಿತು. ಕರಿಮಣಿ ಸರ ಹಾಕಿಕೊಂಡು ಇವರಿಬ್ಬರೂ ಗಂಡ ಹೆಂಡತಿ ತರ ಆಸ್ಪತ್ರೆಗೆ ಹೋಗಿದ್ದರು ಅಂತ ಕಾಣುತ್ತೆ. ಎಲ್ಲವೂ ಅರ್ಥವಾಯಿತು. ಅಸಹಾಯಕ ವೀಕ್ಷಕಿಯಾದೆ. ನನ್ನ ಕಣ್ಮುಂದೆ ಈಗ ಬರೀ ಕತ್ತಲು. ಮರು ಕ್ಷಣದಲ್ಲಿ ರಾಜೇಂದ್ರನನ್ನು ಹೆಗಲ ಮೇಲೆ ಹಾಕಿಕೊಂಡು ಕೈಯಲ್ಲಿ ಬ್ಯಾಗ್ ಹಿಡಿದು ಹೊರಬಂದೆ. ಶಶಿಧರ ಎತ್ತಲೋ ನೋಡುತ್ತಾ ನಿಂತಿದ್ದ.

ಅತ್ತೆ ಗೋಡೆಗೆ ಒರಗಿ ನಿಂತಿದ್ದವರು, 'ವಿಜಿಯ ಎಲ್ಲಿಗೆ ಹೊರಟೆ?' ಎಂದರು.

'ಎಲ್ಲಿಗಾದರೂ ಹೋಗಲೇಬೇಕಲ್ಲ?' ಎಂದೆ.

'ಇದು ನಿನ್ನ ಮನೆ. ಮನೆ ಬಿಟ್ಟು ಹೋಗುವಂತ ತಪ್ಪು ನೀನೇನೂ ಮಾಡಿಲ್ಲ. ಮನೆಯಿಂದ ಹೋಗಬೇಕಾಗಿರುವವರು ಹೋಗಲಿ' ಎನ್ನುತ್ತ ಬಹಳ ಪ್ರಯಾಸದಿಂದ ಶಶಿಧರನ ಬಳಿ ಹೋಗಿ ಕತ್ತಿಡಿದು ಬಾಗಿಲಾಚೆ ತಳ್ಳಿದರು. ಬಟ್ಟೆಬರೆಗಳನ್ನು ತೆಗೆದೆಸೆದರು. 'ಸಕುಂತ ನಡೆಯಾಚೆ' ಎಂದು ಅವಳನ್ನು ದೂಕಿದರು.

'ಅಕ್ಕಯ್ಯ ನಂದೇನು ತಪ್ಪಿಲ್ಲ. ನನ್ನ ಕ್ಷಮಿಸಕ್ಕಯ್ಯ' ಎಂದು ಜೋರಾಗಿ ಅಳುತ್ತಾ ಸಕುಂತ ಮನೆಯಿಂದ ಹೊರ ನಡೆದಳು. ಇದನ್ನು ನೋಡಲು ಊರಿಗೆ ಊರೇ ಸೇರಿತ್ತು.

ಬದುಕು ಹೀಗೆ ನನ್ನನ್ನು ವಂಚಿಸುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ನೀನೇ ನನ್ನ ಜೀವ, ನೀನಿಲ್ಲದೆ ನಾನಿಲ್ಲ ಎಂಬ ಅಂದಿನ ಗಟ್ಟಿನುಡಿಗಳು ಈಗ ಜೊಳ್ಳಾಗಿದ್ದವು. ದೇಹ–ಮನಸ್ಸು ಸೋತು ಬಳಲತೊಡಗಿತು. ಕಡೆಯ ತನಕ ಜೊತೆಯಾಗಿ ಬಾಳೋಣ ಎಂದವನು ಮೂರೇ ವರ್ಷದಲ್ಲಿ ಬಾಳಿಂದ ಮರೆಯಾಗಿ ಹೋಗಿದ್ದ. ಪ್ರೀತಿ ಪ್ರೇಮ ಮೋಹ ಶೃಂಗಾರ ಸೆಳೆತ ಋಣಾನುಬಂಧಗಳೆಲ್ಲವನ್ನೂ ಯಾವುದೋ ಒಟ್ಟಾಗಿ ನುಂಗಿ ನೀರು ಕುಡಿಯಿತು. ಎಷ್ಟು ಸುರಿದಿರಬಹುದು ಕಣ್ಣೀರು. ಬಿಕ್ಕಳಿಕೆಗಳಿಗೂ ಲೆಕ್ಕವಿಲ್ಲ. ಸಂಸಾರ, ಮನೆ ಮಕ್ಕಳು, ಗಂಡ, ನಗು ನಲಿವು ಎಂದು ಸೊಗಯಿಸಿಕೊಂಡು ಬಂದವಳಿಗೆ ಸಿಕ್ಕಿದ್ದು ಚಿನ್ನದ ಸೂಜಿ. ನನ್ನ ಕನಸುಗಳೆಲ್ಲ ಗಲ್ಲಿಗೇರಿದ್ದವು. ಬಾನಂಗಳದ ನಕ್ಷತ್ರಗಳೆಲ್ಲ